# ಶರಣ ಮಾದಾರ ಧೂಳಯ್ಯನ ಕಾಯಕದ ಪರಿಕಲ್ಪನೆ.

**ಡಾ. ಎಚ್. ಎ. ಭೋಗಲೆ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸಿ.ಟಿ.ಇ. ಸಂಸ್ಥೆಯ ಶ್ರೀಮತಿ ಎ. ಎ. ಪಾಟೀಲ
ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ,
ಚಿಕ್ಕೋಡಿ, ಬೆಳಗಾವಿ–591 201.

**Article Link: https://aksharasurya.com/2023/07/h-a-bhogale/**

ಶರಣರ ಕಾಯಕ ಕ್ರಾಂತಿ ಭಾರತೀಯ ಇತಿಹಾಸದಲ್ಲಿ ಹಾಗೂ ಹನ್ನೆರಡನೆಯ ಶತಮಾನದಲ್ಲಿ ಒಂದು ಹೊಸ ಅಧ್ಯಾಯ. ಸಕಲ ಜೀವಾತ್ಮರಿಗೆ ಲೇಸನೆ ಬಯಸುತ್ತ ಜನರ ಮನೆ, ಮನಗಳನ್ನು ಯಾವುದೇ ಮತ ವರ್ಗ ಭೇದವಿಲ್ಲದೆ ಒಂದಾಗಿ ಬೆಸೆದ ಸಾರ್ವತ್ರಿಕ ಬೆಳಕು ಹಚ್ಚಿದ ವಿಶೇಷ ಘಟ್ಟ. ಬಸವಣ್ಣನವರು ಜನಿಸಿದಾಗ ಸಮಾಜದಲ್ಲಿ ಸಾಮಾಜಿಕ ಪರಿಸ್ಥಿತಿ ಅತ್ಯಂತ ಅಸಹನೀಯವಾಗಿತ್ತು. ವೈದಿಕ ಸಂಪ್ರದಾಯದ ಹೆಸರಿನಲ್ಲಿ ಶಾಸ್ತ್ರ ಕಟ್ಟು ಕಟ್ಟಳೆಗಳ ವಿಧಿಯಲ್ಲಿ ಬಂಧಿತವಾಗಿದ್ದ ಅಂದಿನ ಸಮಾಜ ಕೇವಲ ಪಟ್ಟಭದ್ರ ಹಿತಗಳ ಭೋಗ ಭೂಮಿಯಾಗಿತ್ತು. ದೀನದಲಿತರಿಗೆ ಯಾವ ಧಾರ್ಮಿಕ ಹಕ್ಕುಗಳಿಲ್ಲದೆ ಅಂದಿನ ಸಮಾಜದಲ್ಲಿ ಮಾನ್ಯತೆಯೂ ಇರಲಿಲ್ಲ. ಇಂತಹ ದುಸ್ಥಿತಿಯಲ್ಲಿ ಬಸವಣ್ಣನವರು ಕ್ರಾಂತಿಯ ಹೊಸ ಕಹಳೆಯನ್ನು ಮೊಳಗಿಸಿ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ನೈತಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಹೊಸ ವಿಚಾರಧಾರೆ ಹರಿಯುವಂತೆ ಮಾಡಿದರು. ತಮ್ಮ ಗಹನವಾದ ಆಲೋಚನೆಗಳಿಂದ ವೈದಿಕ ಸಂಪ್ರದಾಯ ಪ್ರತಿಪಾದಿಸಿದ್ದ ಜನನ ಆಧಾರಿತ ವೃತ್ತಿ ಸಂಬಂಧಿ ಸಿದ್ಧಾಂತವನ್ನು ತೊಡೆದು ಹಾಕಲು ವೃತ್ತಿ ಸ್ವಾತಂತ್ರ್ಯವನ್ನು ಮತ್ತು ಶ್ರಮದ ಪವಿತ್ರತೆಯನ್ನು ಬೋಧಿಸಿದರು.

ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ನೆರೆಯವರಿಗೆ ಹೊರೆಯಾಗದಂತೆ, ಸಮಾಜಕ್ಕೆ ಶುಭವಾಗುವಂತೆ ಮೇಲು–ಕೀಳೆನ್ನದ ಶಿವಾರ್ಪಣ ಮನೋಭಾವದಿಂದ ಧರ್ಮಮಾರ್ಗದಲ್ಲಿ ಸದಾ ದುಡಿಯುವುದೇ ಕಾಯಕ; ಇದು ನಿತ್ಯಜೀವನದಲ್ಲಿ ಮಾತ್ರವಲ್ಲ, ಆಧ್ಯಾತ್ಮ ಜೀವನದಲ್ಲಿಯೂ ಕಾಯಕಕ್ಕೆ ವಿಶೇಷ ಮಹತ್ವ ನೀಡಿ ಅದನ್ನು ಯೋಗದ ಮಟ್ಟಕ್ಕೇರಿಸಿ ಅದರಲ್ಲಿ ಸರ್ವಯೋಗಗಳನ್ನು ಸಮನ್ವಯಗೊಳಿಸಿ, ಅದಕ್ಕೆ ಪೂರ್ಣಯೋಗದ ಸ್ಥಾನಮಾನವನ್ನು ಕಲ್ಪಿಸಿಕೊಟ್ಟರು. ಕಾಯಕ ತತ್ವದಿಂದ ಎಲ್ಲ ಬಗೆಯ ಅಸಮಾನತೆಯನ್ನು ನಿರ್ಮೂಲಿಸಿ ಒಂದು

ಸಮಗ್ರವೂ, ಸ್ವತಂತ್ರವೂ, ಸುವ್ಯವಸ್ಥಿತವೂ ಆದ ಸಮಾಜ ನಿರ್ಮಾಣವಾಗಬೇಕೆಂದು ಬಯಸಿದರು. ಜೊತೆಗೆ ಮಾನವನು ಸೋಮಾರಿತನದಿಂದ ಜೀವನ ಮಾಡುವುದು ಹೇಯಕರವಾದುದು. ಕೇವಲ ಹಣಗಳಿಸುವ ವೃತ್ತಿಯನ್ನು ಮಾಡಬಾರದು ಎಂಬ ವಿಚಾರವನ್ನು ಬಿಂಬಿಸುತ್ತ, ಅದಕ್ಕಾಗಿ ಪ್ರತಿಯೊಬ್ಬನು ದೈಹಿಕವೂ, ಮಾನಸಿಕವೂ ಆದ ಶ್ರಮದಿಂದ ಕೂಡಿದ ವೃತ್ತಿಯನ್ನು ಆರಿಸಿಕೊಳ್ಳಬೇಕೆಂದು ತಿಳಿಸಿದರು.

ಆಯ್ದಕ್ಕಿ ಮಾರಯ್ಯ ಹೇಳಿದ ಹಾಗೆ 'ಕಾಯಕದಲ್ಲಿ ನಿರತನಾದಡೆ ಗುರುದರುಶನವಾದರೂ ಮರೆಯಬೇಕು. ಲಿಂಗಪೂಜೆಯಾದರೂ ಮರೆಯಬೇಕು ಎಂದು ಕಾಯಕವನ್ನು ಮನಃಪೂರ್ವಕವಾಗಿ ಮಾಡಬೇಕೆಂದು ಹೇಳಿದ್ದಾರೆ. ದುಡಿಮೆ ಅಥವಾ ಕಾಯಕವೆಂಬುದು ಶರಣರು ಪ್ರತಿಪಾದಿಸಿದ ಉನ್ನತ ಮೌಲ್ಯ. ಶರಣರು ಪ್ರತಿಪಾದಿಸಿದ ಹಲವಾರು ವಿಚಾರಗಳಲ್ಲಿ ಅತ್ಯಂತ ಹೆಚ್ಚಿನ ಮೌಲ್ಯವುಳ್ಳ ವಿಚಾರವೆಂದರೆ ಕಾಯಕ ಸಿದ್ಧಾಂತ. ಈ ಕಾಯಕದ ಒಂದು ಬೆಳಕನ್ನು ಹೊದ್ದು ತಮ್ಮ ಹುಟ್ಟಿನ ಸಾರ್ಥಕ್ಯವನ್ನು, ಧನ್ಯತೆಯನ್ನು ಪಡೆದುಕೊಂಡ ಎಷ್ಟೋ ಜೀವಿಗಳ ಬಾಳು ಸಾರ್ವಕಾಲಿಕ ಸತ್ಯವೆಂದು ಆರಾಧಿಸುತ್ತೇವೆ; ಅಂಥ ಶರಣರಲ್ಲಿ ಕಾಯಕಯೋಗಿ ಮಾದಾರ ಧೂಳಯ್ಯ ಕೂಡ ಒಬ್ಬನಾಗಿದ್ದಾನೆ.

ಧೂಳಯ್ಯ ಬಸವಣ್ಣನವರ ಸಮಕಾಲೀನರಲ್ಲಿ ಕಿರಿಯವನಾದವ. ಇದು ಅನೇಕ ವೀರಶೈವ ಕಾವ್ಯ, ಪುರಾಣಗಳಿಂದ ತಿಳಿದು ಬರುತ್ತದೆ. ಸಮಾಜದ ಕೆಳಸ್ತರದಿಂದ ಬಂದ ಈತ ಚರ್ಮವನ್ನು ಹದ ಮಾಡಿ ಪಾದರಕ್ಷೆ ಹೊಲೆಯುವ ಕಾಯಕ ಮಾಡುತ್ತಿದ್ದ. 'ಕಾಮಧೂಮ ಧೂಳೇಶ್ವರ' ಎಂಬುದು ಈತನ ಅಂಕಿತನಾಮ. ಇಂಥ ಧೂಳಯ್ಯ ತನ್ನ ಕಾಯಕವನ್ನು ಒಂದು ಸವಾಲಾಗಿ ಸ್ವೀಕರಿಸಿ ಜೀವನದಲ್ಲಿ ಶ್ರಮಿಸಿದವನು. ಕಾಯಕದ ಶೈಲಿಯನ್ನು ಗಮನಿಸಿದಾಗ ತಾನು ಹೊಲಿಯುವ ಪಾದರಕ್ಷೆಯ ವಿವಿಧ ಭಾಗಗಳನ್ನು ಪರಿಚಯಿಸುವ ರೀತಿ ಕೆಳಗಿನ ವಚನವೊಂದರಲ್ಲಿ ಇಂತಿದೆ.

**ಕಟ್ಟಿದೆ ಘಟದಟ್ಟೆಯ ಹೊಲಿದು,**
**ಇಕ್ಕಿದೆ ಚತುರ್ವಿಧದ ನಾಲ್ಕು ಗುಂಟವ ಬಲಿದು,**
**ಗುಂಟದ ದ್ವಾರದಲ್ಲಿ, ಉಭಯ ಸಂಚದ ಬಾರ ತೆಗೆದು,**
**ತೊಡಕು ಬಂಧವನಿಕ್ಕಿ,**
**ಅಡಿಯ ಬಿಡದಂತೆ, ಹಿಂದಣ ಮಡ**
**ಮುಂದಣ ಉಂಗುಷ್ಟಕ್ಕೆ ಒಂದನೊಂದು ಜಾರದಂತೆ ಬಂಧಿಸಿ,**
**ಸಕಲೇಂದ್ರಿಯವೆಂಬ ಉಭಯವ ಸಂಧಿಸಿ ಕುಣಿಕೆಯನಿಕ್ಕಿ,**
**ಕಾಮದ ಒಡಲ ಮಾದಿಗ ಬಂದೆ,**

**ಘಟ ತೋಕುಳು ತೊಗಲು ಹದ ಬಂದಿತ್ತು**
**ಹೊತ್ತು ಹೋದಿಹಿತಣ್ಣಾ**
**ಮೆಟ್ಟಡಿಯ ಕೊಂಡ ರೊಕ್ಕವ ಕೊಡಿ**
**ಒಪ್ಪಿದರಿರಲಿ ಒಪ್ಪದಿದ್ದಡೆ**
**ಮೂರು ಮುಖದಪ್ಪಗೆ ಕೊಟ್ಟೆಹೆ**
**ತಪ್ಪಡಿಯ ಮೆಟ್ಟೆಹೋಗುತ್ತಿದ್ದೇನೆ,**
**ಚನ್ನಯ್ಯ ಪ್ರಿಯ ಧೂಳನ ಧೂಳಿಗೊಳಗಾಗಿ**

ಈ ವಚನ ಧೂಳಯ್ಯ ಬಾಹ್ಯವಾಗಿ ಮತ್ತು ಆಂತರಿಕವಾಗಿ ಪಾದರಕ್ಷೆ ಮಾಡುವ ಕಾರ್ಯವನ್ನು ಸೂಚಿಸುತ್ತದೆ. ವೃತ್ತಿ ಮತ್ತು ಪ್ರವೃತ್ತಿ ಎರಡನ್ನು ಮಾರ್ಮಿಕವಾಗಿ ತಾದಾತ್ಮ್ಯಗೊಳಿಸಿದ್ದಾನೆ. ಮನ, ಬುದ್ಧಿ, ಚಿತ್ತ, ಅಹಂಕಾರವೆಂಬ ಚತುರ್ವಿಧ ಗುಂಟವ ಬಲಿದು, ಇಷ್ಟಲಿಂಗವೆಂಬ ಉಭಯ ಸಂಚದ ಬಾರ ತೆಗೆದು ತೊಡಕು ಬಂಧವನಿಕ್ಕಿ ಅಡಿಯ ಬಿಡದಂತೆ, ಹಿಂದಣ ಮಡ ಮುಂದಣ ಉಂಗುಷ್ಠಕ್ಕೆ ಒಂದನ್ನೊಂದು ಜಾರದಂತೆ ಸಕಲೇಂದ್ರಿಯವೆಂಬ ಉಭಯವ ಸಂಧಿಸಿ ಕುಣಿಕೆಯನಿಕ್ಕಿ, ಹದವಾದ ಘಟದ ತೊಗಲಿನಿಂದ ಪಾದರಕ್ಷೆ ಮಾಡಿದ್ದಾನೆ. ಇಂಥ ವಿಶಿಷ್ಟವಾದ ಪಾದರಕ್ಷೆಯನ್ನು ಕೊಳ್ಳಲು ಧೂಳಯ್ಯ ಯಾರಿಗೂ ಬಲವಂತ ಮಾಡುವುದಿಲ್ಲ. 'ಕೊಂಡವರಿಂದ ರೊಕ್ಕ ಬಿಡುವುದಿಲ್ಲ'. ಒಪ್ಪಿದರೆ ಇರಲಿ ಇಲ್ಲದಿದ್ದರೆ ಬೇಡ, ಸಮಯವಿಲ್ಲ, ಹೊತ್ತು ಹೋಗುತ್ತಿದೆ ಬೇಗ ಬೇಗ ಎಂದು ತ್ವರೆ ಮಾಡುವ ಧೂಳಯ್ಯ ಸುಮ್ಮನೆ ಹೋಗುವುದಿಲ್ಲ. ತಪ್ಪಡಿಯ ಮೆಟ್ಟೆ ಹೋಗುತ್ತಿದ್ದೆನೆಂದು ಡಂಗುರ ಬಾರಿಸುತ್ತಿದ್ದಾನೆ. ಇಲ್ಲಿ ಕೆಲಸ ಮಾಡಿ ಕೂಲಿ ಕೇಳದೆ ಹೋಗಲು ಕಷ್ಟಪಟ್ಟು ಬೆವರು ಸುರಿಸಿ ಮಾಡಿದ ಪಾದರಕ್ಷೆಗಳನ್ನು ನೀವಿಲ್ಲದಿದ್ದರೆ ಇನ್ನೊಬ್ಬ, ಮಗದೊಬ್ಬ, ಎಂಬ ಭಾವವನ್ನು ತಾಳಿದ್ದ ಈತ ಬದುಕಿನ ಬಾಹ್ಯಕ್ರಿಯೆಗಳನ್ನು ಸಂಪೂರ್ಣವಾಗಿ ಕಾಯಕಕ್ಕೆ ಸಮರ್ಪಿಸಿಕೊಂಡು ಕಾಯಕ ಪರಿಶುದ್ಧವೆಂಬುದನ್ನು ಕೆಳಗಿನ ವಚನಗಳಲ್ಲಿ ನೋಡಬಹುದು.

**ಸತ್ಯಶುದ್ಧ ಕಾಯಕವ ಮಾಡಿ ತಂದು,**
**ವಂಚನೆಯಿಲ್ಲದೆ ಪ್ರಪಂಚಳಿದು,**
**ನಿಚ್ಚ ಜಂಗಮಕ್ಕೆ ದಾಸೋಹವ ಮಾಡುವ**
**ಸದ್ಭಕ್ತನ ಹೃದಯದೊಳಗೆ ಅಚ್ಚೊತ್ತಿದಂತಪ್ಪ**
**ಕಾಮಧೂಮ ಧೂಳೇಶ್ವರ**

ಎಂದು ಮಾಡುವ ಕಾಯಕ ವಂಚನೆಯಿಲ್ಲದೆ, ಪ್ರಾಮಾಣಿಕವಾಗಿ ದುಡಿತದಿಂದ ಬಂದ ದ್ರವ್ಯದಿಂದ ಜಂಗಮ ದಾಸೋಹ ಮಾಡಬೇಕು. ಮೋಸ, ವಂಚನೆ, ಲಂಚ, ಕಳವು, ದರೋಡೆಯಿಂದ ಬಂದ ದ್ರವ್ಯ ದಾಸೋಹಕ್ಕೆ

ಅರ್ಪಿತವಾಗಲಾರದು ಎಂಬುದನ್ನು ಮನದಟ್ಟು ಮಾಡಿಸಿದ್ದಾನೆ.

**ಅರಿದು ಚುಚ್ಚುವರೆಲ್ಲರೂ ದನದಟ್ಟೆ**
**ಮರೆದು ಚುಚ್ಚುವರೆಲ್ಲರೂ ದನದಟ್ಟೆ**
**ನಾ ಚುಚ್ಚುವುದೆಲ್ಲ ಸತ್ತ ಜೀವದನದಟ್ಟೆ**
**ಅಟ್ಟೆಯ ಕೊಯ್ದು ಮೆಟ್ಟಿಸಿದೆ ಸತ್ಯರಿಗೆಲ್ಲಕ್ಕೂ**
**ಎನಗೆ ಬಟ್ಟ ಬಯಲ ತೋರಬೇಕೆಂದು**
**ನಿಮ್ಮ ಬಟ್ಟೆಯಲ್ಲಿ ನೀವೆ ಹೋಗಿ**
**ಎನ್ನ ಬಟ್ಟೆ ಕಾಮಧೂಮ ಧೂಳೇಶ್ವರನ ಬಟ್ಟೆಯೆ ಸಾಕು**

ಈ ವಚನದಲ್ಲಿ ಧೂಳಯ್ಯ ಜ್ಞಾನಿಗಳು ಮತ್ತು ಅಜ್ಞಾನಿಗಳು ದನದ ತೊಗಲಿನಿಂದ ಪಾದರಕ್ಷೆಯನ್ನು ಮಾಡುತ್ತಾರೆ. ಆದರೆ ನಾನು ಸಂಸಾರದಿಂದ ದೂರಾದ ಜೀವವೆಂಬ ತೊಗಲಿನಿಂದ ಜೋಡನ್ನು ಸಿದ್ಧಪಡಿಸುತ್ತೇನೆ. ಇಂಥ ಜೋಡನ್ನು ಸಿದ್ಧಪಡಿಸಿ ಅದನ್ನು ಸತ್ಯರು ಮೆಟ್ಟಿಕೊಳ್ಳಲು ಅವರಿಗೆ ಕೊಡುತ್ತೇನೆ. ಹೀಗೆ ನಾನು ಮಾಡಿದಲ್ಲಿ ಬಟ್ಟ ಬಯಲು ಅಂದರೆ ಪರಮಾತ್ಮನು ದೊರಕುವನು. ಆದರೆ ಜನರು ತಮ್ಮ ಇಚ್ಛಾನುಸಾರ ತಮ್ಮ ತಮ್ಮ ಬಟ್ಟೆಯಲ್ಲಿ ಹೋಗುತ್ತಾರೆ. ಆದರೆ ನಾನು ಅವರ ಬಟ್ಟೆಯಲ್ಲಿ ಹೋಗದೆ ಪರಮಾತ್ಮನ ಬಟ್ಟೆಯಲ್ಲಿ ಹೋದರೆ ಸಾಕು ಎಂದಿದ್ದಾನೆ. ಇಲ್ಲಿ ಧೂಳಯ್ಯ ಮಾಡುವ ಕಾಯಕ ಸತ್ತ ದನದ ಹೊಟ್ಟೆಯನ್ನು ಕೊಯ್ದು ಚಪ್ಪಲಿ ಮಾಡುವುದೆಂದು ಹೇಳುವುದರ ಮೂಲಕ ಸತ್ತಂತಿದ್ದ ಸಮಾಜಕ್ಕೆ ಶಸ್ತ್ರ ಚಿಕಿತ್ಸಕನಾಗಿ ಕಂಗೋಳಿಸುತ್ತಾನೆ. ಈ ವಚನವು ಕಾಯಕ ನಿಷ್ಠೆಯಲ್ಲಿ ಭಕ್ತಿ ಜ್ಞಾನವೂ ಅಡಗಿದೆ ಎಂಬ ತಿಳುವಳಿಕೆಯನ್ನು ಸೂಚಿಸುತ್ತದೆ. ಧೂಳಯ್ಯ ಕಾಯಕದಲ್ಲಿ ನಿರತನಾದಾಗ ಕೈಲಾಸವೂ ಸುಳ್ಳು, ಕೈಲಾಸಪತಿಯೂ ಸುಳ್ಳು ಎಂಬ ವಿಚಾರವನ್ನು ಕೆಳಗಿನ ವಚನಗಳಲ್ಲಿ ನೋಡಬಹುದು.

**ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ,**
**ಪ್ರತ್ಯಕ್ಷವಾದ ಪರಮೇಶ್ವರನ ಕಂಡು,**
**ಇತ್ತಲೇಕಯ್ಯ, ಕಾಯದ ತಿತ್ತಿಯ ಹೊತ್ತಾಡುವವನ ಮುಂದೆ?**
**ನಿನ್ನ ಭಕ್ತರ ಠಾವಿನಲ್ಲಿಗೆ ಹೋಗಿ ಮುಕ್ತಿಯ ಮಾಡು**
**ನೀ ಹೊತ್ತ ಬಹುರೂಪ (ದಿ) ತಪ್ಪದೆ**
**ರಜತ ಬೆಟ್ಟದ ಮೇಲಕ್ಕೆ ಹೋಗು,**
**ನಿನ್ನ ಭಕ್ತರ ಮುಕ್ತಿಯ ಮಾಡು.**
**ಕಾಮಧೂಮ ಧೂಳೇಶ್ವರನ ಕರುಣದಿಂದ ನೀನೆ ಬದುಕು**

ಪಾದರಕ್ಷೆ ಹೊಲಿಯುವ ಕಾಯಕದಲ್ಲಿ ತಲ್ಲೀನನಾದ ಭಾವಜೀವಿಯಾದ ಕಾಯಕಯೋಗಿಯೊಬ್ಬನ ಕನಸುಗಾರಿಕೆಯ ಹಿನ್ನೆಲೆಯಲ್ಲಿ ಮೂಡಿಬಂದ ಈ

ಕಾಲ್ಪನಿಕ ಚಿತ್ರ ಗುರು, ಭಕ್ತಿ, ಕಾಯಕ ಶ್ರದ್ಧೆಯನ್ನು ಏಕಕಾಲಕ್ಕೆ ಒಟ್ಟಾಗಿ ಮನದಟ್ಟು ಮಾಡಿಕೊಡುತ್ತದೆ. ಇಲ್ಲಿ ಧೂಳಯ್ಯನ ಗುಪ್ತಭಕ್ತಿಗಿಂತ ಕಾಯಕ ನಿಷ್ಠೆಯೇ ಆಕರ್ಷಕವಾಗಿ ಮೂಡಿಬಂದಿದೆ. ಧೂಳಯ್ಯನ ಉಳಿಯ ತುದಿಯಲ್ಲಿ ಶಿವ ಪ್ರತ್ಯಕ್ಷನಾದಾಗ ಆತ ಕೇಳುವ ಮೊದಲ ಪ್ರಶ್ನೆ ಇತ್ತಲೇಕಯ್ಯ? ಕಾಯಕ ತಿತ್ತಿಯನ್ನು ಹೊತ್ತು ಆಡುತ್ತಿರುವ ತನ್ನ ಮುಂದೆ ನೀನೆನ್ನನಾಡುವುದಿದೆ ಎಂದು ಪರಮೇಶ್ವರನನ್ನು ವ್ಯಂಗ್ಯಮಾಡುತ್ತಾನೆ. ಮತ್ತು ನಿನ್ನ ಧ್ಯಾನದಲ್ಲಿ ತೊಡಗಿದ ಭಕ್ತರ ಠಾವಿನಲ್ಲಿಗೆ ಹೋಗು, ಅವರನ್ನು ಮುಕ್ತಿಯ ಮಾಡು, ಕಾಮಧೂಮ ಧೂಳೇಶ್ವರನ ಕರುಣದಿಂದ ನೀನೆ ಬದುಕು, ಎನ್ನುವ ಎದೆಗಾರಿಕೆ ತೋರುತ್ತಾನೆ. ಹೀಗೆ ಕಾಯಕದಲ್ಲಿ ನಿರತನಾದಾಗ ಯಾಂತ್ರಿಕವಾಗಿ ಪರಮಾತ್ಮ ಪ್ರತ್ಯಕ್ಷನಾದದ್ದನ್ನು ಕಂಡು ಧೂಳಯ್ಯನಿಗೆ ಆಗುವುದಿಲ್ಲ. ಇಂಥಹ ಧೂಳಯ್ಯನ ಕಾಯಕದ ಮಹಿಮೆ ಶ್ರೇಷ್ಠತೆಯಿಂದ ಕೂಡಿದ್ದು ಇಂದಿನ ಸಮಾಜಕ್ಕೆ ಮಾರ್ಗದರ್ಶಿಯಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಸಂ. ಡಾ. ಬಿ.ಆರ್. ಹಿರೇಮಠ, ಸಂಕೀರ್ಣ ವಚನ ಸಂಪುಟ–3, 1993.
2. ಡಾ. ಮ.ನ. ಜವರಯ್ಯ, ದಲಿತ ವರ್ಗದ ಶರಣರು ಒಂದು ಅಧ್ಯಯನ, 1990.
3. ಡಾ. ಎಸ್.ಎಸ್. ಕೋತಿನ, ಮಾದಾರ ಧೂಳಯ್ಯನ ವಚನಗಳು, 1986.
4. ಡಾ. ಬಸವರಾಜ ಸಬರದ, ವಚನ ಚಳುವಳಿ, 1992.